ಮಾಡಿದ್ದಾರೆ. ಇದರ ಬಗ್ಗೆ ಮಾಧ್ಯಮಗಳಲ್ಲಿ ಕೂಡ ಒಂದು episode type ವರದಿಯಾಗಿದೆ. ದಯಮಾಡಿ ಗಿರಿನಗರ ಪೊಲೀಸ್ ಠಾಣೆಯವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು. ರಾಜ್ಯದ ಮೂಲೆ ಮೂಲೆಯಿಂದ ಅಮಾಯಕರು ಬೆಂಗಳೂರಿಗೆ ಕೂಲಿಗಾಗಿ ಬರುತ್ತಾರೆ. ಅವರಿಗೆ ತೊಂದರೆಯನ್ನು ಕೊಡತಕ್ಕಂಥ ಕೆಲಸ ಈ ಬೆಂಗಳೂರು ನಗರದ ಪೊಲೀಸ್ ಠಾಣೆಯಲ್ಲಿ ನಡೆಯುತ್ತಿದೆ. ದಯಮಾಡಿ ಅಂಥವರಿಗೆ ರಕ್ಷಣೆ ಕೊಡಬೇಕೆಂದು ನಿಮ್ಮ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಗೂಳಿಹಟ್ಟಿ ಶೇಖರ್‌ರವರು ಈ ವಿಚಾರದ ಬಗ್ಗೆ ನನ್ನೊಂದಿಗೆ personal ಆಗಿ ಮಾತನಾಡಿದ್ದಾರೆ. ಇವತ್ತು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅವರ ಕ್ಷೇತ್ರದಿಂದ ಬಂದ ಜನ ಕೆಲಸ ಮಾಡುವಂಥ ಸಂದರ್ಭದಲ್ಲಿ ಅವರ ಮೇಲೆ ಕಳ್ಳತನದ ಆರೋಪ ಹೊರಿಸಿದ್ದಾರೆಂದು ಹೇಳಿದ್ದಾರೆ. ಪೊಲೀಸ್ ಠಾಣೆಯಲ್ಲಿ ಅವರೊಂದಿಗೆ ಬಹಳ ಅಮಾನುಷವಾಗಿ ನಡೆದುಕೊಂಡಿದ್ದಾರೆಂದು ಹೇಳಿದ್ದಾರೆ. ಇದುವರೆಗೆ ಪೊಲೀಸ್ ಠಾಣೆಯ ರಂಗಸ್ವಾಮಿ ಮತ್ತು ಮಾಲತೇಶ್‌ರವರ ಮೇಲೆ ಅವರು ಆ ರೀತಿ ಮಾಡಿದ್ದಾರೆಂದು ಯಾವುದೇ ರೀತಿಯ complaints ಬಂದಿಲ್ಲ. ಆದರೂ ಸಹ ಅಲ್ಲಿನ ಡಿಸಿಪಿ ಯವರಿಗೆ ಹೇಳಿ ಇದರ ಬಗ್ಗೆ ತನಿಖೆ ಮಾಡಲಿಕ್ಕೆ ತಿಳಿಸುತ್ತೇನೆ ಹಾಗೂ ವಿಚಾರಣೆಯ ಸಂದರ್ಭದಲ್ಲಿ ಅವರ ಮೇಲೆ ಅಮಾನುಷವಾಗಿ ವರ್ತಿಸಿದ್ದಾರೆ ಅವರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಡಿಸಿಪಿ ಯವರಿಗೆ ಸೂಚನೆಯನ್ನು ಕೊಡುತ್ತೇನೆ.

ಶ್ರೀ ಗೂಳಿಹಟ್ಟಿ ಶೇಖರ್ : ಅವರನ್ನು ಹೆದರಿಸಲಿಕ್ಕೆ ಖಾಲಿ ಪತ್ರದ ಮೇಲೆ ಸಹಿ ಹಾಕಿಸಿಕೊಂಡು ಹೋಗಿದ್ದಾರೆ.

ಅಧ್ಯಕ್ಷರು : ಆಯಿತು. ಕ್ರಮ ತೆಗೆದುಕೊಳ್ಳುತ್ತಾರೆ. ಖಾದರ್ ಮಾತನಾಡಿ.

8) ವಿಷಯ: ನವ ಮಂಗಳೂರು ಬಂದರಿನ ಸುತ್ತ ಮುತ್ತ ಪರಿಸರದ ಬಗ್ಗೆ ಕಾಳಜಿ ಮಹಿಸುವ ಕುರಿತು.

ಶ್ರೀ ಯು.ಟಿ. ಖಾದರ್ (ಮಂಗಳೂರು) : ನವ ಮಂಗಳೂರು ಬಂದರಿನಲ್ಲಿ ವಿದೇಶಗಳಿಂದ ಇವತ್ತು ಕಲ್ಲಿದ್ದಲ್ಲನ್ನು ಆಮದು ಮಾಡಿ ಅಲ್ಲಿಂದ ಜಿಂದಾಲ್‌ಗೆ, ಬೇರೆ ಕಡೆಗೆ ಸಾಗಾಣಿಕೆ ಮಾಡುತ್ತಿದ್ದಾರೆ. ಅಂಥ ಸಂದರ್ಭದಲ್ಲಿ

ಪರಿಸರದ ಬಗ್ಗೆ ಕಾಳಜಿ ವಹಿಸದೆ ಅಲ್ಲಿ ಪರಿಸರ ಮಾಲಿನ್ಯ ತಡೆಯಲಿಕ್ಕೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಈ ಹಿಂದೆ ಅದಿರು ಸಾಗಾಣಿಕೆ ಮಾಡುವಾಗ ಕೆಂಪುಮಯವಾಗಿತ್ತು. ಈಗ ಕಲ್ಲಿದ್ದಲು ಕಪ್ಪು ಆಗಿ ಆ ಪ್ರದೇಶದಲ್ಲಿರುವಂಥ ಜನಸಾಮಾನ್ಯರು ಆ ಜಾಗಗಳಿಂದ ವಲಸೆ ಹೋಗಿದ್ದಾರೆ. ಅದೇ ರೀತಿಯಲ್ಲಿ ಬಹುಶಃ ಆ ಬೀಚ್‌ಗೆ ಹೋಗುವಂಥ ರಸ್ತೆಯೂ ಸಹ ಸಂಪೂರ್ಣವಾಗಿ ಹದಗೆಟ್ಟು ಹೋಗಲಿಕ್ಕಾಗುವುದಿಲ್ಲ. ಹಾಗಾಗಿ ಪರಿಸರ ಕಾಪಾಡುವ ದೃಷ್ಟಿಯಿಂದ ಇದನ್ನೆಲ್ಲಾ ಸರ್ಕಾರ ಅರಿತು ಕೊಂಡು ಕ್ರಮಕ್ಕೈಗೊಳ್ಳಬೇಕು. ಏಕೆಂದರೆ ತಕ್ಷಣಕ್ಕೆ ಸಣ್ಣ ಕಂಪೆನಿಯನ್ನು ಪ್ರಾರಂಭ ಮಾಡುವಾಗ ಪರಿಸರ ಇಲಾಖೆಯವರು, ಅದು ಸರಿಯಿಲ್ಲ, ಇದು ಸರಿಯಲ್ಲವೆಂದು ಪರಿಸರವನ್ನು ನೋಡಲಿಕ್ಕೆ ನೂರು ಸಲ ಹೋಗುತ್ತಾರೆ. ಜನಸಾಮಾನ್ಯರಿಗೆ ಇಷ್ಟೊಂದು ತೊಂದರೆಯಾಗುವಾಗ ಆಗಿನ ಡಿ.ಸಿ.ಯವರು ಅಲ್ಲಿಗೆ ಹೋಗಿ ಆ ಕಾಂಪೌಂಡ್ ಗೋಡೆಯನ್ನು height ಮಾಡಲಿಕ್ಕೆ ಹೇಳಿದ್ದರು. ಅದನ್ನು ಕೂಡ ಇವತ್ತಿನವರೆಗೆ ಮಾಡಲಿಲ್ಲ. ಅದು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿದ್ದರೂ ಸಹ ರಾಜ್ಯ ಸರ್ಕಾರ ಪರಿಸರದ ವಿಷಯದಲ್ಲಿ ಕಾಳಜಿ ವಹಿಸಿಕೊಂಡು ಅಲ್ಲಿ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ನಗರಾಭಿವೃದ್ಧಿ ಸಚಿವರು) : ಮಾನ್ಯ ಸದಸ್ಯರಾದ ಶ್ರೀ ಯು.ಟಿ. ಖಾದರ್‌ರವರು ಮಂಗಳೂರಿನ ಪಣಂಬೂರು ಬಂದರಿಗೆ ವಿದೇಶದಿಂದ import ಮಾಡಿಕೊಳ್ಳುವ ಕಲ್ಲಿದ್ದಲನ್ನು ತಂದು ಅಲ್ಲಿ stock ಮಾಡುವುದರಿಂದ ತುಂಬಾ ಪರಿಸರ ಮಾಲಿನ್ಯವಾಗುತ್ತದೆ, ಹಿಂದೆ ಡಿ.ಸಿ. ಯವರು ಹೋಗಿ ರೈಡ್ ಮಾಡಿದ್ದರೆಂದು ಹೇಳಿದರು. ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಇದನ್ನು ನಾನು Environment Department ಮತ್ತು Pollution Control Board ಗಮನಕ್ಕೆ ತಂದು ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಶ್ರೀ ಅಭಯ ಚಂದ್ರರವರದು ಆಗಿದೆ. ಶ್ರೀ ವೆಂಕಟರಾವ್ ನಾಡಗೌಡರು ಮಾತನಾಡಿ.